REGD.NEWS PAPER RNI 50347/1989
RNI.Reg.No.KA/BGGPO/2516/2021-23
Licenced to post without Pre-payment
Registered Regn.No.
WPP.CO-1
Posted at BANGALORE PSO, MYSORE ROAD,
BANGALORE – 560026

Date of publication 18th of every month
Permitted to post on 20th or 21st

ಕರ್ನಾಟಕ ಆರ್ಯವೈಶ್ಯ ಮಹಾಸಭಾ (ರಿ)

# ವಾರ್ತಾಪತ್ರ

ಕನ್ನಡ ಮಾಸ ಪತ್ರಿಕೆ



ನಂ.16, ಶೇಷಾದ್ರಿ ರಸ್ತೆ, ಗಾಂಧಿನಗರ, ಬೆಂಗಳೂರು – 560009
ದೂರವಾಣಿ : 080-22206151 – 22206152 – 22206153
Website: www.kavms.com E-mail: kavmss@gmail.com

ಸಂಪಾದಕರು:
ರಾ.ಪ. ರವಿಶಂಕರ್

ಕಾರ್ಯಾಲಯ ಸಮಯ
ವಾರದ ದಿನಗಳಲ್ಲಿ ಬೆಳಿಗ್ಗೆ : 10.30 ರಿಂದ ಸಂಜೆ: 5.30
ಭಾನುವಾರ : ಬೆ. 10.30 ರಿಂದ ಮಧ್ಯಾಹ್ನ : 3.00ರ ವರೆಗೆ

ಸಂಪುಟ : ೩೫ ಡಿಸೆಂಬರ್ ೨೦೨೨ ಬೆಲೆ : 1 ರೂ. ಪುಟಗಳು : 4 ಸಂಚಿಕೆ : ೧೨



## ಮಲ್ಲೇಶ್ವರಂ ಆರ್ಯವೈಶ್ಯ ಸಂಘ (ರಿ)


## ಶ್ರೀ ಕನ್ಯಕಾಪರಮೇಶ್ವರಿ ದೇವಾಲಯ

8ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-03

**10ನೇ ಶ್ರೀ ವಾಸವಿ ಬ್ರಹ್ಮರಥೋತ್ಸವದ** ಅಂಗವಾಗಿ

# ನಾಗಕನ್ಯೆ-ಶ್ರೀ ವಾಸವಿ


**ಭವ್ಯ ನಾಗಲೋಕದ ಸೃಷ್ಟಿ - ನಾಗಲೋಕದಲ್ಲಿ ವಿಹರಿಸಿ , ಆನಂದಿಸಿ**



**50 ಕುಶಲ ಕರ್ಮಿಗಳ 80 ದಿನಗಳ ನಿರಂತರ ಪರಿಶ್ರಮ**

**16.12.2022 ರಿಂದ 02.01.2023ರ ವರೆವಿಗೂ**

**ದರ್ಶನದ ಸಮಯ ಬೆಳಿಗ್ಗೆ 9.30 - 1.30. ಸಂಜೆ 3.00 - 10.00 ಘಂಟೆ**



**ವಾಸವಿ ಬ್ರಹ್ಮರಥೋತ್ಸವ**
**ದಿನಾಂಕ 25-12-2022**
**ಭಾನುವಾರ ಬೆಳಿಗ್ಗೆ 11 ಘಂಟೆಗೆ**

ಸಕುಟುಂಬ ಪರಿವಾರ ಸಮೇತ ಬನ್ನಿ
ವಿ.ಸೂ:
ವಿಶೇಷ ದರ್ಶನಕ್ಕೆ ಅವಕಾಶವಿದೆ. ಒಬ್ಬರಿಗೆ ಸೇವಾಶುಲ್ಕ ರೂ. 100.00 ಮಾತ್ರ
(ದೇವಾಲಯದ ಕೌಂಟರ್‌ನಲ್ಲಿ ಲಭ್ಯ)

# ಅಭಿನಂದನೆಗಳು

ರಾಜ್ಯದ ಶಿಕ್ಷಣ ಕ್ಷೇತ್ರದಲ್ಲಿ ಪ್ರಖ್ಯಾತಿ ಹೊಂದಿರುವ ಹೆಸರು ಡಾ॥ ಎಂ ಕೆ ಶ್ರೀಧರ್. ವಿಜಯ ಕಾಲೇಜಿನ ಭೋಧಕರಾಗಿ ವೃತ್ತಿಯನ್ನು ಪ್ರಾರಂಭಿಸಿ ಪಿ.ಹೆಚ್.ಡಿ ಪದವಿಯನ್ನು ಪಡೆದು ಶಿಕ್ಷಣ ಕ್ಷೇತ್ರದಲ್ಲಿ ಆಗಾದವಾದ ಸಾಧನೆಯನ್ನು ಮಾಡಿ ಕರ್ನಾಟಕ ಸರ್ಕಾರದ ಜ್ಞಾನ ಆಯೋಗದ ಅಧ್ಯಕ್ಷರಾಗಿ ಮೌಲ್ಯಾಧಾರಿತ ಶಿಕ್ಷಣಕ್ಕೆ ಹತ್ತು ಹಲವು ಯೋಜನೆಯನ್ನು ರೂಪಸಿ ಘನ ಸರ್ಕಾರಕ್ಕೆ ಪ್ರಸ್ತಾವನೆಗಳ್ನು ಕಳುಹಿಸಿಕೊಟ್ಟು ಅತ್ಯುತ್ತಮವಾಗಿ ಕಾರ್ಯನಿರ್ವಹಿಸಿದ ಹೆಗ್ಗಳಿಕೆ ಡಾ॥ ಎಂ ಕೆ ಶ್ರೀಧರ್‌ರವರದ್ದು. ರಾಷ್ಟ್ರೀಯ



ಡಾ॥ ಶ್ರೀ ಎಂ ಕೆ ಶ್ರೀಧರ್

ಸ್ವಯಂ ಸೇವಕ ಸಂಘದ ಪ್ರಭಾವಿ ಕಾರ್ಯಕರ್ತರಲ್ಲಿ ಒಬ್ಬರಾಗಿ ಅತ್ಯುತ್ತಮ ಸಂಘಟಕರಾಗಿ ಸಾವಿರ–ಸಾವಿರ ಸಂಖ್ಯೆಯ ಯುವಜನತೆಗೆ ಮಾರ್ಗದರ್ಶಕರಾಗಿ, ಆದರ್ಶಕರಾಗಿ ಬೆಳೆದು ನಿಂತಿರುವ ಡಾ॥ ಎಂ ಕೆ ಶ್ರೀಧರ್‌ರವರು ಪ್ರಸ್ತುತ ನೂತನವಾಗಿ ಲೋಕಾರ್ಪಣೆಯಾದ **ಚಾಲುಕ್ಯ ವಿಶ್ವವಿದ್ಯಾಲಯದ ಕುಲಪತಿಗಳಾಗಿ** ನೇಮಕವಾಗಿದ್ದಾರೆ.

ಇಂತಹ ಸುಸಂದರ್ಭದಲ್ಲಿ ಕರ್ನಾಟಕ ಆರ್ಯವೈಶ್ಯ ಮಹಾಸಭೆಯು ಡಾ॥ ಶ್ರೀ ಎಂ.ಕೆ ಶ್ರೀಧರ್‌ರವರ ನಿವಾಸಕ್ಕೆ ತೆರಳಿ ಸಾಧನೆಗಳನ್ನು ಮೆಚ್ಚಿ ಗೌರವ ಪೂರ್ವಕವಾಗಿ ಅಭಿನಂದನೆ ಸಲ್ಲಿಸಿದರು.



ಶ್ರೀ ರಾಘವೇಂದ್ರ ಶೆಟ್ಟಿ

ಕೊಪ್ಪಳ ಜಿಲ್ಲೆ ಗಂಗಾವತಿ ನಗರದ ವಾಣಿಜ್ಯೋದ್ಯಮಿ, ತಾರುಣ್ಯದಿಂದಲೇ ಸಂಘಟನೆಯನ್ನು ಮೈಗೂಡಿಸಿಕೊಂಡು ರಾಜಕೀಯ ಕ್ಷೇತ್ರಕ್ಕೆ ಪಾದಾರ್ಪಣೆ ಮಾಡಿದ ಶ್ರೀ ರಾಘವೇಂದ್ರ ಶೆಟ್ಟಿ. **ಗಂಗಾವತಿ ನಗರಸಭೆಗೆ** ಎರಡು ಬಾರಿ ಅಧ್ಯಕ್ಷರಾಗಿ ಉತ್ತಮ ಕೆಲಸ ಕಾರ್ಯ ಮಾಡುವ ಮೂಲಕ ಗಂಗಾವತಿ ನಗರದ ಜನಾನುರಾಗಿಗಳಾಗಿದ್ದಾರೆ. ಶ್ರೀಯುತರ ಸಂಘಟನಾ ಶಕ್ತಿಯನ್ನು, ಕಾರ್ಯವೈಖರಿಯನ್ನು ಜನ ಮನ್ನಣೆಯನ್ನು ಗುರುತಿಸಿದ ಕರ್ನಾಟಕ ಘನ ಸರ್ಕಾರವು, **ಗಂಗಾವತಿ ನಗರ ಯೋಜನೆ ಪ್ರಾಧಿಕಾರದ ಅಧ್ಯಕ್ಷರನ್ನಾಗಿ** ನೇಮಕ ಮಾಡಿ ಆದೇಶ ಹೊರಡಿಸಿದೆ. ಶ್ರೀಯುತರು ತಮ್ಮ ಪ್ರಾಧಿಕಾರವಧಿಯಲ್ಲಿ ಮತ್ತಷ್ಟು ಉತ್ತಮ ಸೇವೆಯನ್ನು ಗಂಗಾವತಿ ನಗರದ ಅಭಿವೃದ್ಧಿಗೆ ನೀಡುವ ಮೂಲಕ ಜನಮನದಲ್ಲಿ ಶಾಶ್ವತವಾಗಿ ಉಳಿದು, ಬೆಳೆದು ಭವಿಷ್ಯದ ದಿನಗಳಲ್ಲಿ ಶಾಸಕರಾಗಿ ಉನ್ನತ–ಉನ್ನತ ಪದವಿಗಳನ್ನು ಗಳಿಸುವಂತಾಗಲೆಂದು ಸಮಸ್ತ ಆರ್ಯವೈಶ್ಯ ಬಂಧುಗಳ ಪರವಾಗಿ ಕರ್ನಾಟಕ ಆರ್ಯವೈಶ್ಯ ಮಹಾಸಭೆಯು ಶುಭಾಷಯವನ್ನು ತಿಳಿಸಿ ಅಭಿನಂದಿಸುತ್ತದೆ.

# ಮೈಸೂರಿನ ಬಹುಪಯೋಗಿ ಕಟ್ಟಡ



ಉದ್ದೇಶಿತ ಕಟ್ಟಡ ವಿನ್ಯಾಸ

ಕರ್ನಾಟಕ ಆರ್ಯವೈಶ್ಯ ಮಹಾಸಭೆಯ ಮತ್ತೊಂದು ಮಹೋನ್ನತ ಯೋಜನೆ ಮೈಸೂರು ನಗರದ ಹೃದಯ ಭಾಗದಲ್ಲಿರುವ ಗೀತಾಮಂದಿರ ರಸ್ತೆಯಲ್ಲಿ ತಲೆ ಎತ್ತುತ್ತಿದೆ. ಈ ಯೋಜನೆಯಲ್ಲಿ ವಿದ್ಯಾರ್ಥಿಗಳಿಗೆ, ವಿದ್ಯಾರ್ಥಿನಿಯರಿಗೆ ಹಾಸ್ಟೆಲ್ ಸೌಲಭ್ಯಗಳನ್ನು 2023–24ರ ಶೈಕ್ಷಣಿಕ ವರ್ಷಕ್ಕೆ ನೀಡಲು ಮಹಾಸಭೆ ಉತ್ಸುಕವಾಗಿದೆ. ಇದೇ ಕಟ್ಟಡದಲ್ಲಿ 18 ಸುಸಜ್ಜಿತ ಅಥಿತಿಗೃಹಗಳು ಮತ್ತು ಸಾಮೂಹಿಕ ವಸತಿ ವ್ಯವಸ್ಥೆಗೆ ಡಾರ್ಮೆಟರಿಯೂ ಸಹ ನಿರ್ಮಾಣವಾಗುತ್ತಿದ್ದೂ, ನೂತನ ಸಂವತ್ಸರಕ್ಕೆ ಲೋಕಾರ್ಪಣೆಯಾಗಿ ಸಮಾಜದ ಬಂಧುಗಳ ಉಪಯೋಗಕ್ಕೆ ದೊರೆಯುತ್ತದೆ. ಸುಮಾರು 7.5 ಕೋಟಿ ರೂಪಾಯಿಗಳ ವೆಚ್ಚದಲ್ಲಿ ನಿರ್ಮಾಣವಾಗುತ್ತಿರುವ ವೈವಿಧ್ಯಮಯ ವಾಸ್ತುಶಿಲ್ಪದ ಈ ಕಟ್ಟಡ ನಿರ್ಮಾಣ ಮಹಾಸಭೆಯ ಘನತೆಯನ್ನು ಮತ್ತಷ್ಟು ಹೆಚ್ಚಿಸುತ್ತದೆ ಎಂಬುದು ನಿಸ್ಸಂದೇಹ.



ನಿರ್ಮಾಣ ಹಂತದಲ್ಲಿರುವ ಕಟ್ಟಡ ಕಾಮಗಾರಿ

ಇಂತಹ ಉತ್ತಮ ಯೋಜನೆಯನ್ನು ಮಹಾಸಭೆ ಸಮಾಜಕ್ಕೆ ನೀಡಲು ದೀರ್ಘಾವಧಿ ಗುತ್ತಿಗೆಗೆ ನೀಡಿ ಸಹಕರಿಸಿದ ಮೈಸೂರಿನ ಚೌದ್ರಿ ಅಪ್ಪಾಜಯ್ಯ ಶೆಟ್ಟರ ಧರ್ಮ ಛತ್ರ ಮತ್ತು ಉಚಿತ ವಿದ್ಯಾರ್ಥಿ ನಿಲಯ ಟ್ರಸ್ಟ್‌ನ ಆಡಳಿತ ಮಂಡಳಿಯನ್ನು ಮಹಾಸಭೆ ಗೌರಪೂರ್ವಕವಾಗಿ ಅಭಿನಂದಿಸುತ್ತದೆ.

# ಸಂಧ್ಯಾಶ್ರೀ ಯೋಜನೆ



ಕರ್ನಾಟಕ ಆರ್ಯವೈಶ್ಯ ಮಹಾಸಭೆಯ ಹೃದಯಸ್ಪರ್ಶಿ ಯೋಜನೆಗಳಲ್ಲಿ ಒಂದಾದ ಸಂಧ್ಯಾಶ್ರೀ ಯೋಜನೆ ಅಡಿ 17 ವಿಧವಾ ಮಾತೆಯರಿಗೆ ಮಾಸಿಕ ವೇತನವನ್ನು ಮಹಾಸಭೆಯ ಕಛೇರಿಯಲ್ಲಿ ವಿತರಿಸಲಾಯಿತು. ಈ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ನಾಡಿನ ಹೆಸರಾಂತ ಲೆಕ್ಕ ಪರಿಶೋಧಕರಲ್ಲಿ ಒಬ್ಬರಾದ ಶ್ರೀ ಪಿ ಎನ್ ಸೂರ್ಯಪ್ರಕಾಶ್‌ರವರು ಆಗಮಿಸಿ ವಿಧವಾ ಮಾತೆಯರಿಗೆ ಪ್ರಥಮ ಚೆಕ್ಕುಗಳನ್ನು ಹಸ್ತಾಂತರ ಮಾಡಿದರು, ನಂತರ ಮಾತನಾಡಿದ ಶ್ರೀಯುತರು ಮಹಾಸಭೆ ಈ ಯೋಜನೆ ತಮ್ಮ ಜೀವನದ ಅಭಿವೃದ್ಧಿಗೆ ಸಹಕಾರಿಯಾಗಲಿ ಎಂದು ಹಿತ ನುಡಿಗಳನ್ನು ತಿಳಿಸಿ ಮಹಾಸಭೆಯ ಯೋಜನೆಗಳನ್ನು ಮೆಚ್ಚಿ ಶುಭ ಕೋರಿದರು.

ಈ ಸಂದರ್ಭದಲ್ಲಿ ಕೋಶಾಧ್ಯಕ್ಷರಾದ ಶ್ರೀ ಎನ್ ಎಸ್ ಶ್ರೀನಿವಾಸಮೂರ್ತಿ ಕಾರ್ಯದರ್ಶಿಗಳಾದ ಶ್ರೀ ಕೆ ಆರ್ ಕೃಷ್ಣ ಹಾಗೂ ಮಹಾಸಭೆಯ ಹಲವು ನಿರ್ದೇಶಕರು ಭಾಗಿಯಾಗಿದ್ದರು.

# ಮಹಿಳಾ ಸಬಲೀಕರಣ

## ಸಮಿತಿಯಲ್ಲಿ ಕಾರ್ಯನಿರ್ವಹಿಸಲು ಆಸಕ್ತಿ ಇದೆಯೇ?ಹಾಗಿದ್ದಲ್ಲಿ ನಿಮ್ಮ ಹೆಸರನ್ನು ನೋಂದಾಯಿಸಿಕೊಳ್ಳಿ,

ಜಾಗೃತ ಮಹಿಳೆ ಈ ದೇಶದ ಆಸ್ತಿ, ಮಹಿಳಾ ಶಕ್ತಿಯನ್ನು ಒಗ್ಗೂಡಿಸಿ ಮಹಿಳೆಯರಲ್ಲಿ ಉದ್ಯೋಗಾಸಕ್ತಿಗಳನ್ನು ತುಂಬಿ ಅವರಲ್ಲಿರುವ ಜ್ಞಾನವನ್ನು ಜಾಗೃತಗೊಳಿಸಿ ತನ್ಮೂಲಕ ಯಶಸ್ವಿ ಉದ್ಯಮಿಯಾಗಿ ಬೆಳೆಯಲು ಅವಶ್ಯವಿರುವ ಮಾರ್ಗದರ್ಶನಗಳನ್ನು, ಸಂಪನ್ಮೂಲ ಕ್ರೋಢೀಕರಣ ಹಾಗೂ ಸಲಹೆಗಳನ್ನು ನೀಡಿ ಬೆಳೆಸಲು ಕರ್ನಾಟಕ ಆರ್ಯವೈಶ್ಯ ಮಹಾಸಭೆಯ ಆಶ್ರಯದಲ್ಲಿ **ಮಹಿಳಾ ಸಬಲೀಕರಣ ಘಟಕ**ವನ್ನು ಪ್ರಾರಂಭಿಸಲು ಇಚ್ಚಿಸಿದೆ.

ರಾಜ್ಯ ಮಟ್ಟದಲ್ಲಿ ಹಾಗೂ ಜಿಲ್ಲಾ ಮಟ್ಟದಲ್ಲಿ ಪ್ರತ್ಯೇಕ ಸಮಿತಿಯನ್ನು ರಚಿಸಲು ಆಸಕ್ತಿಯನ್ನು ಮಹಾಸಭೆ ಹೊಂದಿದೆ. ಈಗಾಗಲೇ ವ್ಯಾಪಾರ, ವ್ಯವಹಾರ, ವಾಣಿಜ್ಯೋದ್ಯಮ, ಕೈಗಾರಿಕೋದ್ಯಮಗಳಲ್ಲಿ ತೊಡಗಿಸಿಕೊಂಡಿರುವ ಆಸಕ್ತ ಮಹಿಳೆಯರು ದಯಮಾಡಿ ತಮ್ಮ ಹೆಸರನ್ನು ಮಹಾಸಭೆಯ ವೆಬ್‌ಸೈಟ್ www.kavms.comನಲ್ಲಿ ಲಭ್ಯವಿರುವ ಅರ್ಜಿಯಲ್ಲಿ ನೋಂದಾಯಿಸಿಕೊಳ್ಳಲು ಕೋರಿದೆ.

**ನೊಂದಾಯಿಸಲು ಕೊನೆಯ ದಿನಾಂಕ**
**31–01–2023**

# ಅಮರಜ್ಯೋತಿ ಯೋಜನೆ

## ಸದಸ್ಯತ್ವಕ್ಕೆ ಆಹ್ವಾನ

2018 ರಿಂದ ಕಾರ್ಯನಿರ್ವಹಿಸುತ್ತಿರುವ ಮಹಾಸಭೆಯ ವೈಶಿಷ್ಟ ಪೂರ್ಣ ಯೋಜನೆ ಅಮರಜ್ಯೋತಿ. ಈ ಯೋಜನೆ ಸಾವಿರಾರು ಮನೆಗಳಲ್ಲಿ ಬೆಳಕು ನೀಡುವ ದೂರದೃಷ್ಟಿಯ ಹೃದಯಸ್ಪರ್ಶಿ ಯೋಜನೆ. ಈಗಾಗಲೇ ಸುಮಾರು 1.75 ಕೋಟಿ ರೂಪಾಯಿಗಳ ಪರಿಹಾರ ಧನವನ್ನು ವಿತರಿಸಲಾಗಿದೆ.

**ಸದಸ್ಯರಿಂದ ಸದಸ್ಯರಿಗಾಗಿ**

ಎಂಬ ಪರಿಕಲ್ಪನೆಯೊಂದಿಗೆ ಕಾರ್ಯನಿರ್ವಹಿಸುತ್ತಿರುವ ಈ ಯೋಜನೆಗೆ ಹೊಸದಾಗಿ ಸದಸ್ಯತ್ವ ನೀಡಲು ಮಹಾಸಭೆ ತೀರ್ಮಾನಿಸಿದೆ.

- ★ ಅಮರಜ್ಯೋತಿ ಸದಸ್ಯರಾಗಲು ಕೇವಲ 3000 ರೂಪಾಯಿಗಳನ್ನು ವಿನಿಯೋಗಿಸಬೇಕು.
- ★ ರೂ. 3000 ಗಳಲ್ಲಿ ರೂ. 2500 ತಮ್ಮ ಖಾತೆಯಲ್ಲಿಯೇ ಠೇವಣಿ ಇರುತ್ತದೆ.
- ★ ರೂ. 500 ಆಡಳಿತಾತ್ಮಕ ವೆಚ್ಚಗಳಿಗಾಗಿ ತೆಗೆದುಕೊಳ್ಳಲಾಗುತ್ತದೆ.
- ★ ಯಾವುದೇ ಸದಸ್ಯರು ಮರಣ ಹೊಂದಿದರೆ ಕ್ರಿಯಾಶೀಲ ಸದಸ್ಯರ ಖಾತೆಯಿಂದ 100 ರೂಪಾಯಿಗಳನ್ನು ಕಡಿತಗೊಳಿಸಿ ಗರಿಷ್ಠ 5 ಲಕ್ಷ ರೂಪಾಯಿಗಳ ವರೆವಿಗೂ ಮೃತ ಸದಸ್ಯರ ನಾಮಿನಿಗೆ ಸಾಂತ್ವನ ರೂಪದ ಪರಿಹಾರವನ್ನು ನೀಡಲಾಗುತ್ತದೆ.
- ★ ಪ್ರತಿಯೊಂದು ಸಾವಿನ ಘಟನೆಗಳ ಬಗ್ಗೆ ಮತ್ತು ಸದಸ್ಯರ ಖಾತೆಗಳಿಂದ ಕಡಿತವಾಗಿರುವ ಮೊತ್ತದ ಬಗ್ಗೆ ಆಗಿಂದಾಗ್ಗೆ ಮಾಹಿತಿಗಳನ್ನು ತಾವು ನೋಂದಾಯಿಸಿರುವ ಮೊಬೈಲ್ ಸಂಖ್ಯೆಗೆ ಎಸ್.ಎಮ್.ಎಸ್ ಮೂಲಕ ನೀಡಲಾಗುತ್ತದೆ.

### ಸದಸ್ಯತ್ವಕ್ಕೆ ಅರ್ಹತೆ:

- > ವಯೋಮಿತಿ 20 ರಿಂದ 60 ವರ್ಷದೊಳಗಿರಬೇಕು.
- > ಮಹಾಸಭೆಯ ಸದಸ್ಯರಾಗಿರಬೇಕು, ಇಲ್ಲವೇ ಸದಸ್ಯತ್ವವನ್ನು ಪಡೆದುಕೊಂಡ ನಂತರ ಅಮರಜ್ಯೋತಿ ಯೋಜನೆಯ ಸದಸ್ಯರಾಗಬಹುದು.
- > ಸದಸ್ಯತ್ವ ಪಡೆಯುವ 3 ವರ್ಷಕ್ಕೆ ಮೊದಲು ಯಾವುದೇ ಮಾರಣಾಂತಿಕ ಖಾಯಿಲೆಗಳಿಗೆ ಒಳಗಾಗಿರಬಾರದು.
- > ತಮ್ಮ ಖಾತೆಯಿಂದ ಕಡಿತವಾದ ಮೊತ್ತವನ್ನು ಆಗಿಂದಾಗ್ಗೆ ತುಂಬಲು ಅಮರಜ್ಯೋತಿ **app** ಅಥವಾ ಅಮರಜ್ಯೋತಿ ಖಾತೆಗೆ ನೇರವಾಗಿ ವರ್ಗಾವಣೆ ಮಾಡಲು ಅವಕಾಶವಿದೆ.
- > ತಮ್ಮ ಖಾತೆಯ ಆಗ್ಗಿಂದಾಗಿನ ಸ್ಥಿತಿಗತಿಗಳನ್ನು ತಿಳಿದುಕೊಳ್ಳಲು ಅಮರಜ್ಯೋತಿ **app** ಅನ್ನು ಬಳಸಿ.
- > ಅಮರಜ್ಯೋತಿ ಸದಸ್ಯರಾಗಲು ಅರ್ಜಿಗಳನ್ನು ಮಹಾಸಭಾ ವೆಬ್‌ಸೈಟ್ **www.kavm.com** ಮೂಲಕ ಪಡೆದುಕೊಳ್ಳಲು ಅವಕಾಶವಿದೆ.
- > ಹೆಚ್ಚಿನ ವಿವರಗಳಿಗಾಗಿ ನಿಮ್ಮ ಜಿಲ್ಲೆಯಲ್ಲಿರುವ ಮಹಾಸಭಾ ಕಾರ್ಯಕಾರಿ ಸಮಿತಿ/ಜಿಲ್ಲಾ ಸಮಿತಿ ಸದಸ್ಯರನ್ನು/ಮಹಾಸಭೆ ದೂರವಾಣಿ ಸಂಖ್ಯೆ: 9663900439 ನ್ನು ಸಂಪರ್ಕಿಸಲು ಕೋರಿದೆ.

**ನಮ್ಮ ನಂತರ ನಾವು ಇಚ್ಚಿಸಿದ ವ್ಯಕ್ತಿಗಳಿಗೆ ಆರ್ಥಿಕ ಶಕ್ತಿಗಳನ್ನು ತುಂಬುವ ಅತ್ಯುತ್ತಮ ಯೋಜನೆ**

**ಸದಸ್ಯರಾಗಲು ಕೊನೆಯ ದಿನಾಂಕ: 31.01.2023 ಕೇವಲ 3000 ಜನಗಳಿಗೆ ಮಾತ್ರ ಅವಕಾಶವಿದೆ.**

# ವಾಸವಿ ಇ-ಸೇವಾ



## ತಂತ್ರಜ್ಞಾನದ ಮೈಲಿಗಲ್ಲು

ವಿಶ್ವದ ಯಾವುದೇ ಭಾಗದಿಂದಲ್ಲಾದರೂ ನಿಗದಿತ ಸಮಯದಲ್ಲಿ ಕರ್ನಾಟಕ ರಾಜ್ಯದ 266 ವಾಸವಿ ದೇವಾಲಯಗಳ ಪೈಕಿ ನಾವು ಇಚ್ಛೆಪಟ್ಟ ದೇವಾಲಯದಲ್ಲಿ ಸೇವೆ ಸಲ್ಲಿಸ ಬಹುದಾಗಿರುವ ನೂತನ ತಂತ್ರಜ್ಞಾನದ ವೈಶಿಷ್ಟ್ಯ ಪೂರ್ಣ ಪೋರ್ಟಲ್.

**ಭಕ್ತಾದಿಗಳು, ಅಭಿಷೇಕ, ವಿಶೇಷ ಪೂಜೆಗಳನ್ನು ನೇರವಾಗಿ ವೀಕ್ಷಿಸಲು, ಸೇವಾ ಸಂಕಲ್ಪ ಸ್ವೀಕರಿಸಲು, ಮಂಗಳಾರತಿಯನ್ನು ಪಡೆಯಲು, ಮಂಗಳಾರತಿಗೆ ಕಾಣಿಕೆ ಸಲ್ಲಿಸಲು, ಸಾಧ್ಯವಿರುವಂತಹ ಆಧುನಿಕ ತಂತ್ರಜ್ಞಾನದ ಪೋರ್ಟಲ್.**

### ವಾಸವಿ ದೇವಾಲಯಗಳ ಆಡಳಿತ ಮಂಡಳಿಯವರಿಂದ ಕೋರುವ ಸಹಕಾರ

1. ರಾಜ್ಯದ ಯಾವುದೇ ಭಾಗದಲ್ಲಿರುವ ವಾಸವಿ ದೇವಾಲಯದ ಆಡಳಿತ ಮಂಡಳಿಯವರು ಸುಮಾರು **ರೂ.** 13,000–00 (ಹದಿಮೂರು ಸಾವಿರ) ವೆಚ್ಚದ ತಾಂತ್ರಿಕ ಉಪಕರಣಗಳನ್ನು ತಮ್ಮ ದೇವಾಲಯದಲ್ಲಿ ಅಳವಡಿಸಿಕೊಳ್ಳಬೇಕಾಗಿರುತ್ತದೆ. ದಯವಿಟ್ಟು ಪ್ರತಿಯೊಂದು ಶ್ರೀ ವಾಸವಿ ದೇವಾಲಯದ ಆಡಳಿತ ಮಂಡಳಿಯವರು ಕಡ್ಡಾಯವಾಗಿ ಈ ನಿಟ್ಟಿನಲ್ಲಿ ಸಹಕರಿಸಲು ವಿನಂತಿ.
2. ತಮ್ಮ ದೇವಾಯದ ಎಲ್ಲಾ ಸೇವೆಗಳನ್ನು ಪೋರ್ಟಲ್ (Portal)ನ ಮೂಲಕ ವಿಶ್ವದ ಯಾವುದೇ ಭಾಗದಲ್ಲಿರುವ ಭಕ್ತಾದಿಗಳಿಗೆ ತಿಳಿಸಲು, ಆಗಿಂದಾಗ್ಗೆ ಬದಲಾಯಿಸಿಕೊಳ್ಳಲು ಸಂಪೂರ್ಣವಾದ ಸ್ವಾಮ್ಯ ಆಯಾ ದೇವಾಲಯಗಳಿಗೆ ಇರುತ್ತದೆ.
3. ಯಾವುದೇ ರೀತಿಯ ಆರ್ಥಿಕವಾದ ಹೊರೆ ದೇವಾಲಯಗಳಿಗೆ ಇರುವುದಿಲ್ಲ.

   ನಿಮ್ಮ ಯಾವುದೇ ಆರ್ಥಿಕ ಮಾಹಿತಿಗಳನ್ನು ಮಹಾಸಭೆಗಾಗಲಿ ಅಥವಾ ಇನ್ನಾವುದೇ ಸಂಸ್ಥೆಗೆ ನೀಡುವ ಅವಶ್ಯಕತೆ ಇರುವುದಿಲ್ಲ.
4. ವಾಸವಿ ಇ-ಸೇವಾ ಪೋರ್ಟಲ್ (Portal) ನಿರ್ಮಾಣಕ್ಕೆ ತಗಲುವ ಬೃಹತ್ ವೆಚ್ಚವನ್ನು ಮಹಾಸಭೆಯೇ ಭರಿಸುತ್ತದೆ. ಯಾವುದೇ ವಾರ್ಷಿಕ ಶುಲ್ಕವನ್ನು ಸಹ ದೇವಾಲಯಗಳಿಂದ ಅಪೇಕ್ಷಿಸುವುದಿಲ್ಲ.
5. ರಾಜ್ಯದ ಪ್ರತಿಯೊಂದು ವಾಸವಿ ದೇವಾಲಯದ ಆಡಳಿತ ಮಂಡಳಿಯವರು ದಿನಾಂಕ: 10.01.2023ರ ಒಳಗೆ ತೀರ್ಮಾನಗಳನ್ನು ತೆಗೆದುಕೊಂಡು ಆದಷ್ಟು ಜಾಗ್ರತೆಯಾಗಿ ವಾಸವಿ ಇ-ಸೇವಾ (Portal) ಪೋರ್ಟಲ್‌ಗೆ ಸೇರಿಕೊಳ್ಳಲು ಸಹಕರಿಸಿ.
6. ಇದರಿಂದ: ಭವಿಷ್ಯದಲ್ಲಿ ದೇವಾಲಯಗಳ ಆರ್ಥಿಕ ಸ್ಥಿತಿ ಉತ್ತಮವಾಗುತ್ತದೆ.
7. ನಮ್ಮ ನಮ್ಮ ಊರಿನಲ್ಲಿ ಹುಟ್ಟಿ ಬೆಳೆದ ಯಾವುದೇ ಭಕ್ತಾದಿಗಳು ಪ್ರಪಂಚದ ಯಾವುದೇ ಭಾಗದಲ್ಲಿದ್ದರು ದೇವಾಲಯಗಳೊಂದಿಗೆ ಮತ್ತು ಆಡಳಿತ ಮಂಡಳಿಯೊಂದಿಗೆ ನಿರಂತರ ಸಂಪರ್ಕದಲ್ಲಿದ್ದು ದೇವಾಲಯಗಳ ಅಭಿವೃದ್ಧಿಗೆ ಸಹಕಾರವಾಗುವ ಸಾಧ್ಯತೆಗಳಿವೆ.

**ಇಂದೇ ತೀರ್ಮಾನ ಮಾಡಿ ವಾಸವಿ ಇ-ಸೇವಾ ಪೋರ್ಟಲ್ (Portal) ಗೆ ಉಚಿತ ಪ್ರವೇಶ ಪಡೆಯಿರಿ.**

**ಇದು ಸಮಾಜದ ಘನತೆ, ಶ್ರೀ ವಾಸವಿ ಮಾತೆಯನ್ನು ವಿಶ್ವದ ಜನತೆಗೆ ಪರಿಚಯಿಸಲು ಅಮೃತ ಕಾಲ.**

**ವಿವರಗಳಿಗೆ:** ಕೆ ವಿ ನಾಗಶರಣ್ ಮೊಬೈಲ್ ಸಂಖ್ಯೆ: 9986745273 ಮಧ್ಯಾಹ್ನ 1:00 ರಿಂದ ಸಂಜೆ 4:30 ವರೆಗೂ

# ಲ್ಯಾಪ್‌ಟಾಪ್ ಯೋಜನೆ

LAST DATE FOR APPLICATION 10.01.2023

## ಉನ್ನತ ಶಿಕ್ಷಣದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಮಾತ್ರ

ವೃತ್ತಿಪರ ಕೋರ್ಸ್‌ಗಳಲ್ಲಿ (PROFESSIONAL COURSE) ಅಂದರೇ ಎಂ.ಬಿ.ಎ (M B A), ಎಂ.ಸಿ.ಎ (M C A), ಬಿ.ಸಿ.ಎ (B C A) ಎಂ.ಎಸ್ಸಿ ಕಂಪ್ಯೂಟರ್ ( M Sc COMPUTER SCINCE), ಬಿ.ಎಸ್ಸಿ ಕಂಪ್ಯೂಟರ್ (B Sc COMPUTER SCIENCE), ಡಿಪ್ಲೋಮಾ ಇನ್ ಕಂಪ್ಯೂಟರ್ ( DIPLOMA IN COMPUTERS), ಬಿ.ಇ (BE), ಎಂ.ಟೆಕ್ (M TECH), ಗಳಲ್ಲಿ ವ್ಯಾಸಂಗ ಮಾಡುತ್ತಿರುವ **ಪ್ರತಿಭಾವಂತರು ಮತ್ತು ಆರ್ಥಿಕವಾಗಿ ಹಿಂದುಳಿದಿರುವ** ಕಾಲೇಜು ವಿದ್ಯಾರ್ಥಿಗಳ ಶಿಕ್ಷಣದ ಅನುಕೂಲಕ್ಕಾಗಿ ಮಹಾಸಭೆಯ ನಿಬಂಧನೆಗಳನ್ವಯ ಶೇ 25ರ ಬೆಲೆಗೆ ಲ್ಯಾಪ್‌ಟಾಪ್‌ಗಳನ್ನು ನೀಡುವ ವಿನೂತನ ಯೋಜನೆಯನ್ನು ಪರಿಚಯಿಸುತ್ತಿದೆ.



### ಈ ಯೋಜನೆಯ ಪ್ರಯೋಜನ ಪಡೆಯಲು ಇಚ್ಛಿಸುವ ವಿದ್ಯಾರ್ಥಿಗಳು

- ವಿದ್ಯಾರ್ಥಿಗಳು ಕರ್ನಾಟಕ ರಾಜ್ಯದ ನಿವಾಸಿಗಳಾಗಿರಬೇಕು.
- ಕರ್ನಾಟಕದ ಯಾವುದೇ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಾಗಿರಬೇಕು.
- ಹಿಂದಿನ ಪರೀಕ್ಷೆಯಲ್ಲಿ ಕನಿಷ್ಠ ಶೇ 60ರಷ್ಟು ಅಂಕಗಳಿಸಿರಬೇಕು.
- ಸ್ಥಳೀಯ ಆರ್ಯವೈಶ್ಯ ಸಂಘ/ಸದರಿ ಜಿಲ್ಲೆಯ ಮಹಾಸಭೆ ಕಾರ್ಯಕಾರಿ ಸಮಿತಿ ಸದಸ್ಯರು/ಜಿಲ್ಲಾ ಸಮಿತಿ ಅಧ್ಯಕ್ಷ/ಕಾರ್ಯದರ್ಶಿಗಳ ಧೃಡೀಕರಣವನ್ನು ನೀಡಬೇಕಿರುವುದು ಕಡ್ಡಾಯವಾಗಿರುತ್ತದೆ.
- ವಿದ್ಯಾರ್ಥಿಗಳು ಲ್ಯಾಪ್‌ಟಾಪ್ ಬೆಲೆಯ ಶೇ.25ರಷ್ಟು ಮೊತ್ತವನ್ನು ಭರಿಸಲು ಸಿದ್ಧರಿರಬೇಕು.
- ಯಾವುದೇ ಕಾರಣ ನೀಡದೆ ಅರ್ಜಿಗಳನ್ನು ಪುರಸ್ಕರಿಸುವ-ತಿರಸ್ಕರಿಸುವ ಅಧಿಕಾರ ಕರ್ನಾಟಕ ಆರ್ಯವೈಶ್ಯ ಮಹಾಸಭೆಯದ್ದಾಗಿರುತ್ತದೆ.
- ಲ್ಯಾಪ್‌ಟಾಪ್ ಪಡೆಯಲು ಅರ್ಹತೆ ಪಡೆದ ವಿದ್ಯಾರ್ಥಿಗಳಿಗೆ, ಕೊಡಮಾಡಲಿರುವ ಲ್ಯಾಪ್‌ಟಾಪ್ ಮಾಡೆಲ್ ಬಗ್ಗೆ ತಿಳಿಸಲಾಗುತ್ತದೆ.

**ಅರ್ಜಿಗಳನ್ನು online ನಲ್ಲಿ ಭರ್ತಿ ಮಾಡಲು ಮಾತ್ರ ಅವಕಾಶವಿರುತ್ತದೆ online ಅರ್ಜಿಗಳಿಗಾಗಿ www.kavms.com ಸಂಪರ್ಕಿಸಿ**

**ವಿಶೇಷ ಸೂಚನೆ : ನೇರವಾಗಿ ಬಂದ ಅರ್ಜಿಗಳನ್ನು ಪುರಸ್ಕರಿಸಲಾಗುವುದಿಲ್ಲ**

**ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕ: 10-01-2023**

# ಯುವ ಸಬಲೀಕರಣ ವಿಭಾಗ

## ಯಶಸ್ವಿ ಉದ್ಯಮಿಯಾಗಲು ಬಯಸುವ ಆರ್ಯವೈಶ್ಯ ಯುವ ಜನಾಂಗಕ್ಕಾಗಿ ಒಂದು ದಿನದ ವಿಶೇಷ ಕಾರ್ಯಾಗಾರ

ಜಾಗತಿಕ ಪ್ರಪಂಚದಲ್ಲಿ ವಿದ್ಯಾಮಾನಗಳು ನಾಗಲೋಟದಿಂದ ಸಾಗುತ್ತಿದೆ. ಆ ಓಟಕ್ಕೆ ಸರಿಸಮಾನವಾಗಿ ನಾವು ನಮ್ಮ ಅಸ್ಮಿತೆಯನ್ನು ಬೆಳೆಸಿಕೊಳ್ಳದಿದ್ದಲ್ಲಿ ನಮ್ಮ ಪ್ರಗತಿ ಸಾಧ್ಯವಾಗುವುದಿಲ್ಲ. ಹೊಸ ಹೊಸ ಆವಿಷ್ಕಾರಗಳು ಉನ್ನತ್ತೀಕರಣಗೊಳ್ಳುತ್ತಿರುವ ತಾಂತ್ರಿಕತೆ ಆಗಿಂದಾಗ್ಗೆ ಬದಲಾಗುತ್ತಿರುವ ಕಾನೂನು ಕಟ್ಟಳೆಗಳು ಇಂತಹ ಹತ್ತು ಹಲವು ವಿಷಯಗಳ ಬಗ್ಗೆ ನಮ್ಮ ಯುವಜನತೆಗೆ ಮಾಹಿತಿ ನೀಡಿ ತಮ್ಮೂಲಕ ಯುವ ಜನರಲ್ಲಿ ಚೈತನ್ಯ ತುಂಬಿ ಉದ್ಯಮಿಗಳಾಗಿ ಬೆಳೆಯಲು ಅವಶ್ಯವಿರುವ ಮಾರ್ಗದರ್ಶನ ನೀಡುವ ಸಲುವಾಗಿ ಡಾ|| ಎಂ ವಿ ಅಜಯ್ ಕುಮಾರ್ ರವರ ನೇತೃತ್ವದಲ್ಲಿ ಯುವ ಸಬಲೀಕರಣ ಘಟಕ ಮಹಾಸಭೆ ಕಾರ್ಯನಿರ್ವಹಿಸುತ್ತಿದೆ.

ಆರ್ಯವೈಶ್ಯ ಜನಾಂಗದ ಮೂಲವೃತ್ತಿ ವ್ಯಾಪಾರ ಮತ್ತು ವ್ಯವಹಾರ. ಪ್ರಾರಂಭದಿಂದಲೂ ಈ ಕ್ಷೇತ್ರದಲ್ಲಿ ನಮ್ಮದೇ ಆದ ಅಸ್ಥಿತ್ವವಿದ್ದು, ಇದರ ಮೂಲಕ ಸಾಕಷ್ಟು ಜನರಿಗೆ ಉದ್ಯೋಗದ ಅವಕಾಶಗಳನ್ನು ನೀಡಿದ್ದ ಹೆಮ್ಮೆಯ ಸಮಾಜ ನಮ್ಮದು. ಆದರೆ ಇಂದು ವಿವಿಧ ಕಾರಣಗಳಿಂದ ನಮ್ಮ ಮೂಲ ವೃತ್ತಿಯನ್ನು ಬಿಟ್ಟು ಬೇರೆ ವೃತ್ತಿಗಳಲ್ಲಿ ನಮ್ಮ ಯುವಕರು ಬದುಕನ್ನು ಕಟ್ಟಿಕೊಳ್ಳುತ್ತಿದ್ದಾರೆ. ಆದಕಾರಣ ಯಶಸ್ವಿ ಉದ್ಯಮಿಯಾಗಲು ಕನಸನ್ನು ಹೊಂದಿರುವ ಆರ್ಯವೈಶ್ಯ ಯುವ ಜನಾಂಗಕ್ಕಾಗಿ ಒಂದು ದಿನದ ವಿಶೇಷ ಕಾರ್ಯಾಗಾರವನ್ನು ಆಯೋಜಿಸಲಾಗಿದೆ.

- ನೀವೊಬ್ಬ ಯಶಸ್ವಿ ಉದ್ಯಮಿಯಾಗಬೇಕೆ?
- ನಿಮ್ಮ ಹೊಸ ಕನಸುಗಳನ್ನು ಅನುಷ್ಠಾನಗೊಳಿಸಲು ಬೇಕಾದ ಸಂಪನ್ಮೂಲಗಳ ಮಾರ್ಗಗಳು ಬೇಕೆ?
- ಬಂಡವಾಳ ಹೂಡುವವರಿಗೆ ನಿಮ್ಮ ಹೊಸ ಆಲೋಚನೆಗಳನ್ನು ಮನವರಿಕೆ ಮಾಡುವ ವಿಧಾನಗಳನ್ನು ಕಲಿಯಬೇಕೆ?
- ಕೇಂದ್ರ ಮತ್ತು ರಾಜ್ಯ ಸರ್ಕಾರದ ಉದ್ಯಮ ಸ್ಥಾಪನೆಗೆ ಬೇಕಾದ ಯೋಜನೆಗಳ ಮಾಹಿತಿಗಳು ಬೇಕೆ?
- ನಮ್ಮ ಸಮಾಜದ ಯಶಸ್ವಿ ಉದ್ಯಮಿಗಳು/ ಸಾಧಕರೊಂದಿಗೆ ಸಂವಾದದ ಮೂಲಕ ನಿಮ್ಮ ಗೊಂದಲಗಳನ್ನು ಪರಿಹರಿಸಿಕೊಳ್ಳಬೇಕೆ?

**ಬನ್ನಿ, ಯುವ ಸಬಲೀಕರಣ ವಿಭಾಗವು ಆಯೋಜಿಸಿರುವ ಒಂದು ದಿನದ ಕಾರ್ಯಾಗಾರದಲ್ಲಿ ಭಾಗವಹಿಸಿ ಯಶಸ್ವಿ ಉದ್ಯಮಿಗಳಾಗಿ.**

### ಒಂದು ದಿನದ ವಿಶೇಷ ಕಾರ್ಯಾಗಾರಕ್ಕೆ ನೊಂದಾಯಿಸಿಕೊಳ್ಳುವ ವಿಧಾನ:

ಒಂದು ದಿನದ ವಿಶೇಷ ಕಾರ್ಯಾಗಾರದಲ್ಲಿ ಭಾಗವಹಿಸಲು ಇಚ್ಛಿಸುವ ಯುವಮಿತ್ರರು ನಿಮ್ಮ ವಿವರಗಳನ್ನು ನೊಂದಾಯಿಸಿಕೊಳ್ಳಲು '9448133559' ಈ ಮೊಬೈಲ್ ಸಂಖ್ಯೆಗೆ ವಾಟ್ಸಪ್ ಮೂಲಕ **WORKSHOP** ಎಂದು ಮೆಸೇಜ್ ಕಳುಹಿಸಿದಾಗ ನಿಮ್ಮ ಮೊಬೈಲ್ ನಂಬರಿಗೆ ಬರುವ ಗೂಗಲ್ ಫಾರಂ ಲಿಂಕನ್ನು ಕ್ಲಿಕ್ ಮಾಡಿ ನಿಮ್ಮ ಹೆಸರು, ವಿಳಾಸ, ಮೊಬೈಲ್ ಸಂಖ್ಯೆ ಹಾಗೂ ಇತರೆ ವಿವರಗಳನ್ನು ಭರ್ತಿಮಾಡಿ **Submit** ಮಾಡಬೇಕು.

### ವಿಶೇಷ ಸೂಚನೆ:

ನೊಂದಣಿ ಶುಲ್ಕವಾಗಿ 500/- ರೂಪಾಯಿಗಳನ್ನು ಪಾವತಿಸಬೇಕು. ಆದರೆ, ಕಾರ್ಯಾಗಾರದಲ್ಲಿ ಭಾಗವಹಿಸಿದ ಎಲ್ಲಾ ಪ್ರತಿನಿಧಿಗಳಿಗೆ ಕಾರ್ಯಕ್ರಮವು ಮುಗಿದ ನಂತರ ನೀವು ಪಾವತಿಸಿರುವ ನೊಂದಣಿ ಶುಲ್ಕ 500/- ರೂಪಾಯಿಗಳನ್ನು ವಾಪಸ್ ನೀಡಲಾಗುವುದು. **ನೊಂದಾಯಿಸಲು ಕೊನೆಯ ದಿನಾಂಕ 10.01.2023** ಈ ಉತ್ತಮ ಅವಕಾಶವನ್ನು ನಿಮಗೆ ತಿಳಿದಿರುವ ಆರ್ಯವೈಶ್ಯ ಸಮಾಜದ ಯುವ ಮಿತ್ರರಿಗೆ ತಿಳಿಸುವ ಮೂಲಕ ಅವರ ಯಶಸ್ಸಿಗೆ ಸಹಕರಿಸಲು ನಾಡಿನ ಸಮಸ್ತ ಆರ್ಯವೈಶ್ಯ ಬಂಧುಗಳಲ್ಲಿ ಮನವಿ ಮಾಡಿಕೊಳ್ಳುತ್ತೇವೆ.

### ಹೆಚ್ಚಿನ ವಿವರಗಳಿಗೆ

ಡಾ.ಅಜಯ್ ಕುಮಾರ್ ಎಂ.ವಿ.
ಅಧ್ಯಕ್ಷರು,
9886359848

ಶ್ರೀ ಎಸ್.ಎನ್. ಶಭರೀಶ್
ಸಂಚಾಲಕರು
9036617178

**ಹಾಗೂ ಯುವ ಸಬಲೀಕರಣ ವಿಭಾಗದ ಎಲ್ಲಾ ಸದಸ್ಯರು, ಕರ್ನಾಟಕ ಆರ್ಯವೈಶ್ಯ ಮಹಾಸಭೆ**
**ಯುವ ಸಬಲೀಕರಣ ವಿಭಾಗ, ಬೆಂಗಳೂರು**

ಮುದ್ರಕರು: ಗಿರೀಶ್ ಪ್ರಿಂಟರ್ಸ್, 163, 1ನೇ ಮುಖ್ಯರಸ್ತೆ, ಶೇಷಾದ್ರಿಪುರಂ, ಬೆಂಗಳೂರು - 560 020 ಇ-ಮೇಲ್ : info@gireeshprinters.com website : www.gireeshprinters.com
ಸಂಪಾದಕರು: ರಾ.ಪ. ರವಿಶಂಕರ್ ಮತ್ತು ಪ್ರಕಾಶಕರು: ಎಸ್ ಕೆ. ಶೇಷಾಚಲ ವಾರ್ತಾಪತ್ರ ಸಮಿತಿಯ ಚೇರ್‌ಮನ್, ಕರ್ನಾಟಕ ಆರ್ಯವೈಶ್ಯ ಮಹಾಸಭಾ ಪರವಾಗಿ, 16, ಶೇಷಾದ್ರಿರಸ್ತೆ, ಗಾಂಧಿನಗರ, ಬೆಂಗಳೂರು-09 ಫೋನ್: 22206151/22206152